PW-3
CW-4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

SPL.Case(NDPS) 10/2021

| | | |
|---|---|---|
| ಸಾಕ್ಷಿದಾರರ ಹೆಸರು | : | ತನುಜಾ ಟಿ ಸವದತ್ತಿ |
| ತಂದೆಯ/ಗಂಡನ ಹೆಸರು | : | ಎಸ್ ಮಂಜುನಾಥ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಪತ್ರಾಂಕಿತ ಕಚೇರಿ ಸಹಾಯಕರು, ಜಿಲ್ಲಾದಿಕಾರಿಗಳ ಕಚೇರಿ ಚಿತ್ರದುರ್ಗ |
| ವಾಸ ಸ್ಥಳ | : | ಚಿತ್ರದುರ್ಗ |

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 4

ದಿ: 18-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ನ್ಯಾಮತಿಯಲ್ಲಿ 20-01-2020 ರಿಂದ 18-10-2021 ರ ವರಗೆ ತಹಶೀಲ್ದಾರ್ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-2 ರವರು ಹೊಸ ಜೋಗದ ಗ್ರಾಮ ಲೆಕ್ಕಾದಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಚಾಸಾ-3 ರವರು ಗ್ರಾಮ ಲೆಕ್ಕಾದಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಈ ಪ್ರಕರಣದಲ್ಲಿ ದಿನಾಂಕಃ 27-07-2021 ರಂದು ನಾನು ಕಚೇರಿಯಲ್ಲಿ ನನ್ನ ಕಾರ್ಯ ನಿರ್ವಹಿಸುತ್ತಿದ್ದಾಗ ಚಾಸಾ-1 ರವರು ಮದ್ಯಾಹ್ನ 12-30 ಗಂಟೆಯಲ್ಲಿ ಹೊಸ ಜೋಗ ಗ್ರಾಮದ ಬಸ್ ನಿಲ್ದಾಣದ ರಸ್ತೆಯ ಪಕ್ಕದ ಮುಂಬಾಗದಲ್ಲಿ ಧರಗೇಶ ನಾಯ್ಕ ಮತ್ತು ಇನ್ನೊಬ್ಬರು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ದಾಳಿಯಲ್ಲಿ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಸಹಕರಿಸಲು ಮನವಿಯನ್ನು ಸಲ್ಲಿಸಿದ್ದರು, ಸದರಿ ಮನವಿ ಈಗ ನೋಡುತ್ತಿದ್ದು ಅದನ್ನು ನಿ.ಪಿ.- 14 ಎಂದು

PW-3
CW-4

ಗುರುತಿಸಲಾಯಿತು. ಹಾಗೂ ಎರಡು ಸರ್ಕಾರಿ ಸಾಕ್ಷಿದಾರರು ಬೇಕು ಅಂತ ಒಂದು ಮನವಿ ನೀಡಿದರು ಈಗ ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.- 15 ಎಂದು ಗುರುತಿಸಲಾಯಿತು. ಅದರಂತೆ ನಾನು ಚಾಸಾ-2 ಮತ್ತು 3 ರವರನ್ನು ನೇಮಿಸಿದ್ದೆ. ನಾನು, ಚಾಸಾ- 2 ಮತ್ತು 3 ರವರು ನಮ್ಮ ಕಚೇರಿ ವಾಹನದಲ್ಲಿ ನ್ಯಾಮತಿ ಪೋಲೀಸ್ ಠಾಣೆಗೆ ಹೋದೆವು, ಅಲ್ಲಿ ಚಾಸಾ-1 ಮತ್ತು ಸಿಬ್ಬಂದಿಗಳು ಇದ್ದರು. ಹೊಸ ಜೋಗದ ಬಸ್ ನಿಲ್ದಾಣದ ಮುಂಭಾಗದಲ್ಲಿ ಯಾರೋ ವ್ಯಕ್ತಿಗಳು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ದಾಳಿ ಗೆ ಸಹಕರಿಸಲು ಬರಬೇಕು ಅಂತ ಹೇಳಿದರು, ಅದಕ್ಕೆ ನಾವು ಸಹಕರಿಸಲು ಒಪ್ಪಿಕೊಂಡೆವು. ನಾನು, ಚಾಸಾ-2 ಮತ್ತು 3 ರವರು ಒಂದು ಜೀಪಿನಲ್ಲಿ ಮತುತ ಚಾಸಾ-1 ಮತ್ತು ಅವರ ಸಿಬ್ಬಂದಿಗಳು ಇಲಾಖಾ ವಾಹನದಲ್ಲಿ ಹೊಸಜೋಗ ಗ್ರಾಮದ ಬಸ್ ನಿಲ್ದಾಣದ ಬಳಿ ಹೆಪಾೋದೆವು. ಆಗ 01-30 ಕ್ಕೆ ಬಿಟ್ಟು ಬಸ್ ನಿಲ್ದಾಣಕ್ಕೆ ಬಂದಾಗ 02-00 ಗಂಟೆ ಆಗಿತ್ತು. ಅಲ್ಲಿ 4 ಜನ ವ್ಯಕ್ತಿಗಳು ಇದ್ದರು. ಆ ವ್ಯಕ್ತಿಗಳು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಮಾಡಿದರು. ಪೋಲೀಸರು ಅವರಲ್ಲಿ 3 ಜನ ವ್ಯಕ್ತಿಗಳನ್ನು ಹಿಡಿದರು. ಒಬ್ಬ ವ್ಯಕ್ತಿ ಅಲ್ಲಿಂದ ಓಡಿ ಹೋಗಿರುತ್ತಾನೆ. ಆ ವ್ಯಕ್ತಿಗಳ ಹೆಸರು ಕೇಳಲಾಗಿ ಧರಣೇಶ ನಾಯ್ಕ, ಲೋಹಿತ್ ನಾಯ್ಕ ಮತ್ತು ನಾಗರಾಜ ಅಂತ ಹೇಳಿದರು. ಓಡಿ ಹೋದ ವ್ಯಕ್ತಿ ಹೆಸರು ದರ್ಶನ್ ಅಂತ ಹೇಳಿದರು.

(ಈ ಹಂತದಲ್ಲಿ ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.